

ಅಂತಾ ಜಾಹೀರಾತುದಾರರು ಎಲ್ಲದಕ್ಕೂ ನಿಂಬೆ ಹಾಕಿ ಹಾಕಿ, ಅದಿಲ್ಲದೆ ಜೀವನಾನೇ ನಡೆಯೋದಿಲ್ಲ ಅನ್ನೋ ಹಾಗೆ ತಲೆತುಂಬಿದ್ದು, ಈಗ ಅವರ ಕುತ್ತಿಗೆಗೇ ಬಂದು ನಿಂತಿದೆ. ಅಡುಗೆಗಂತೂ, ಅದರಲ್ಲೂ ಒಗ್ಗರಣೆಗಳಿಗಂತೂ ಎಕ್ಸ್ಟ್ರಾ ನಿಂಬೆರಸ ಇಲ್ಲದೆ ರುಚಿಸೋದೇ ಇಲ್ಲ. ಎಲ್ಲ ಋತುಗಳಲ್ಲೂ ಸಿಗುವ ಈ ನಿಂಬೆಯ ಉಪ್ಪಿನಕಾಯಿ ಸದಾ ಸಿದ್ಧವಾಗುತ್ತಲೇ ಇರುತ್ತದೆ. ಸಮ್ಮಿಶ್ರ ಸರ್ಕಾರದ ಹಾಗೆ ಒಮ್ಮೆ ಶುಂಠಿ, ಮತ್ತೊಮ್ಮೆ ಹಸಿಮೆಣಸು, ಮಿಶ್ರ ಉಪ್ಪಿನಕಾಯಿ ಎಲ್ಲದರ ಜೊತೆಗೂ ಹೊಂದಿಕೊಂಡು ತನ್ನದೇ ಅಧಿಕಾರವನ್ನು ನಡೆಸುತ್ತಾ ಒಂದು ರೀತಿ 'ಕಿಂಗ್ ಮೇಕರ್' ಎನ್ನಬಹುದಾದ ನಿಂಬೆ ಸದ್ಯಕ್ಕೆ ಎಟುಕಲಾರದಂತಹ ಸಿಂಹಾಸನವನ್ನೇರಿ ಕೂತಿದೆ. ಇನ್ನು ಲಿಂಬೂ ಪಾನಕ, ಲಿಂಬೂ ಸೋಡಾದವರು ಬೊಬ್ಬೆ ಹೊಡೆದುಕೊಳ್ಳುವ ಸ್ಥಿತಿ ಬಂದಿದೆ. ಮುಂಜ್‌ಮುಂಜಾನೆ ನಿಂಬೆರಸ ಜೇನುತುಪ್ಪ ನೀರಿನಲ್ಲಿ ಸೇರಿಸಿ ಕುಡಿದು, ತಮ್ಮ ಬೊಜ್ಜನ್ನು ಕಡಿಮೆ ಮಾಡಿಕೊಳ್ಳಬೇಕೆಂದು ಹಂಬಲಿಸುತ್ತಿದ್ದ ಎಷ್ಟೋ ಡಯಟ್ ಪ್ರಿಯರಿಗೆ ನಿಂಬೆ ಕೋಕ್ ಕೊಟ್ಟಿದೆ. ಉತ್ತರ ಭಾರತೀಯ ತಿನಿಸುಗಳ ಹೋಟೆಲ್ಲುಗಳಲ್ಲಿ ಊಟದ ನಂತರ ಬೆಚ್ಚನೆಯ ನೀರಿನ ಜೊತೆಗೆ ನಿಂಬೆಹೋಳು ಹಾಕಿ ಕೊಡುತ್ತಿದ್ದ ಫಿಂಗರ್ ಬೌಲ್ ಸದ್ಯಕ್ಕೆ ಕ್ಲೀನ್ ಬೋಲ್ಡ್ ಆದ ಲಕ್ಷಣಗಳು ಕಾಣುತ್ತಿವೆ. ಹೆಣ್ಣುಮಕ್ಕಳಿಗೆ ಸೌಂದರ್ಯದ ಮನೆಮದ್ದಿಗೂ ಈ ನಿಂಬೆಯೇ ಗತಿ. ತಲೆಹೊಟ್ಟು, ಕೂದಲು ಮಿಂಚೋಕೆ, ಚರ್ಮ ಹೊಳಿಯೋಕೆ, ನೆತ್ತಿ ತಂಪಾಗೋಕೆ, ಕಾಲು ಕೈ ಉರಿಯುವುದಕ್ಕೆ, ನಿಂಬೆಯೇ ಮನೆ ಮದ್ದು ಅಂತಾ ಬಳಸುತ್ತಿದ್ದವರಿಗೆ ಈಗ ಬಿದ್ದಿದೆ ಸರಿಯಾದ ಗುದ್ದು. ಮನೆ ಹಿಂದೆ ಹಾಕಿದ ನಿಂಬೆ ಗಿಡವನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಯೋ ಸ್ಥಿತಿ ಬಂದಿದೆ. ಸಣ್ಣವೋ ದೊಡ್ಡವೋ ಪೀಚೋ ಎಲ್ಲವನ್ನೂ ಹರಿದುಕೊಂಡು ಹೋಗುವವರಿದ್ದಾರೆ. ಕೊರೊನಾ ಕಾಲದಲ್ಲಿ ಮೂಗಿಗೆ ಎರಡು ಹನಿ ನಿಂಬೆರಸ ಬಿಟ್ಟುಕೊಳ್ಳಿ ಎಂದಿದ್ದಕ್ಕೆ, ಹೇಗಿದ್ರೂ ಹಾದ್ಯಾಗೆ, ಬೀದಿಯಾಗೆ ನಿಂಬೆ ಸಸ್ತಾ ಸಿಗುತ್ತವೆ ಅಂತಾ, ಎಷ್ಟೋ ಜನ ಅರ್ಧರ್ಧ ಹೋಳು ಹಿಂಡಿಕೊಂಡು ಫಜೀತಿ ಪಟ್ಟಿದ್ದರು. ಈ ಬೆಲೆ ಇದ್ದಿದ್ದರೆ, ಪಿಲ್ಲರ್ ತೆಗೆದುಕೊಂಡು ಎಣಿಸಿ ಎರಡು ಹನಿ ಸರಿಯಾಗಿ ಬಿಟ್ಟುಕೊಳ್ಳುತ್ತಿದ್ದರು ಕಾಣುತ್ತೆ.

ಅಡುಗೆಗೆ, ಸೌಂದರ್ಯಕ್ಕೆ ಹೆಣ್ಣುಮಕ್ಕಳಿಗೆ ನಿಂಬೆ ಆಪ್ತವಾದಂತೆ, ಶಕ್ತಿದೇವತೆಗಳಿಗೂ ಭಾರೀ ಪ್ರಿಯವಾದ ಹಣ್ಣಿದು. ಅದೆಂತೆಂತಹ ಬಂಗಾರದ, ಬೆಳ್ಳಿಯ, ವಜ್ರದ, ಹೂವಿನ ಹಾರ ಹಾಕಿದರೂ ಸಹ, ನಿಂಬೆ ಹಾರ ಹಾಕಿದರೇನೇ ಶಕ್ತಿದೇವತೆಗಳಿಗೆ ರೌದ್ರ ಗೆಟಪ್ ಬರೋದು. ಜೊತೆಗೆ ಕತ್ತಿಯನ್ನೋ, ತ್ರಿಶೂಲವನ್ನೋ ಹಿಡಿದಿದ್ದರೆ ಅದಕ್ಕೂ ನಿಂಬೆ ಚುಚ್ಚಿಕೊಂಡಿರುತ್ತವೆ. ದೀಪವೂ ಸಹ ನಿಂಬೆಯದೇ ಕೇಳುತ್ತವೆ. ದಸರಾ ಸಮಯದಲ್ಲಂತೂ ನಸುಕಿನಲ್ಲೇ ಹೆಣ್ಣುಮಕ್ಕಳು ಬನ್ನೀಮರಕ್ಕೆ ಪೂಜೆ ಸಲ್ಲಿಸಿ, ನಿಂಬೆಯ ರಸ ಮರಕ್ಕೆ ಹಿಂಡಿ, ಸಿಪ್ಪೆಯಲ್ಲಿ ತುಪ್ಪದಾರತಿ ಬೆಳಗಿ ಧನ್ಯರಾಗುತ್ತಾರೆ. ಸದ್ಯ ಆ ಕಾಲದಲ್ಲಿ ನಿಂಬೆ ಹೇರಳವಾಗಿ, ಸುಲಭ ಬೆಲೆಗೆ ಸಿಗುತ್ತದೆ ಎಂದು ಸಮಾಧಾನ ಪಡಬೇಕು. ಅಮಾವಾಸ್ಯೆ, ಹುಣ್ಣಿಮೆಯ ಪೂಜೆಗೆ, ಮಾಟ, ಮಂತ್ರ, ತಂತ್ರ ಮಾಡುವವರಿಗೆ ನಿಂಬೆಯಿಲ್ಲದೆ ನಡೆಯುವುದಿಲ್ಲ. ನಿಂಬೆ ಹಿಡಿದು 'ಛೂ... ಮಂತರ್' ಮಾಡಿ ಬೆಲೆಬಾಳುವ ವಸ್ತುಗಳನ್ನು ಸೃಷ್ಟಿಸುವ ಕಾಲ ಹೋಗಿ, ಬೆಲೆಬಾಳುವ ವಸ್ತುಗಳನ್ನು 'ಛೂ... ಮಂತರ್' ಮಾಡಿ, ದುಬಾರಿ ನಿಂಬೆಯನ್ನು ಸೃಷ್ಟಿಸಬೇಕಾದ ಪರಿಸ್ಥಿತಿ ಒದಗಿದೆ. ವಧೂ ವರರು ಮದುವೆಯಾದ ಹೊಸತರಲ್ಲಿ ಸದಾ ನಿಂಬೆ ಹಿಡಿದು ತಿರುಗಾಡುವ ಹಾಗೆ, ಕೆಲವು ರಾಜಕಾರಣಿಗಳೂ ಹಿಡಿದಿರುವುದನ್ನು ಕಾಣಬಹುದು. ಇನ್ಮೇಲೆ ಭ್ರಷ್ಟಾಚಾರದಲ್ಲಿ, 'ನಿಂಬೆ ಭ್ರಷ್ಟಾಚಾರ'ವೂ ಸೇರಿಕೊಳ್ಳಬಹುದು.

ಅಮಾವಾಸ್ಯೆಗೊಮ್ಮೆ ಮನೆಯಲ್ಲಿನ ಗಾಡಿ ಪೂಜೆ ಮಾಡಿ, ಅದರ ಗಾಲಿಗಳಿಗೆಲ್ಲ ಒಂದೊಂದು ನಿಂಬೆ ಇಟ್ಟು, ಅದರ ಮೇಲೆ 'ಡುರ್' ಎಂದು ಗಾಡಿ ಹತ್ತಿಸಿ, ಅವು ಹೊಟ್ಟೆ ಹೊಡೆದುಕೊಂಡು, ಪಚಕ್ ಅಂತಾ ಕರುಳುಗಳೆಲ್ಲಾ ಚೆಲ್ಲಾಪಿಲ್ಲಿಯಾದಾಗಲೇ ನಮ್ ಜನಕ್ಕೆ ಸಮಾಧಾನ. ಈಗಿನ ಶಾಕ್ ಕೊಡುವ ರೇಟಿಗೆ ಗಾಲಿಗೊಂದು ನಿಂಬೆ ಅಂತಾ ಲೆಕ್ಕ ಹಾಕದೆ, ಗಾಡಿಗೊಂದು ನಿಂಬೆ ಎಂದು ಹಾಕುವವವರೇ ಹೆಚ್ಚು. ದ್ವಿಚಕ್ರ ವಾಹನಕ್ಕೆ ಒಂದೇ ನಿಂಬೆಹಣ್ಣನ್ನು ಎರಡು ಹೋಳು ಮಾಡುವುದು, ನಾಲ್ಕು ಚಕ್ರದ ವಾಹನಗಳಾದರೆ ನಿಂಬೆಯನ್ನು ನಾಲ್ಕು ಹೋಳು ಮಾಡಿ ಗಾಡಿ ಹತ್ತಿಸುವಷ್ಟು ಜಾಣರಾಗಿದ್ದಾರೆ. ಗಾಡಿಗೆ ಹಸಿಮೆಣಸಿನಕಾಯಿ ಜೊತೆ ನಿಂಬೆ ಕಟ್ಟುವುದು, ನಿವಾಳಿಸಿ ಒಗೆಯುವುದು, ಎಲ್ಲದಕ್ಕೂ ಸದ್ಯಕ್ಕೆ ಫುಲ್‌ಸ್ಟಾಪ್ ಇಡುವ ಪರಿಸ್ಥಿತಿ.





'ಗಜನಿಂಬೆ ಹೆಣ್ಣೇ', 'ಈ ನಿಂಬೇ ಹಣ್ಣಿನಂತ ಹುಡುಗಿ ಬಂದ್ಲೂ ನೋಡೂ' ಅಂತಾ ಹೀರೋಗಳು ಚುಡಾಯಿಸುತ್ತಿದ್ದ ಆ ಕಾಲದಲ್ಲಿ, ಮುಖ ಸೊಟ್ಟಗೆ ಮಾಡುತ್ತಿದ್ದ ಹೀರೋಯಿನ್ನುಗಳು ಈಗಿನ ಕಾಲದಲ್ಲಾಗಿದ್ದರೆ ಚಿನ್ನಕ್ಕಿಂತ ಒಂದು ಪಟ್ಟು ಮೇಲೇರಿ ಕೂತಿರುವ ನಿಂಬೆಗೆ ಹೋಲಿಸುತ್ತಿರುವುದಕ್ಕೆ ಖುಷಿಯಿಂದ ಬೀಗುತ್ತಿದ್ದರೇನೋ ಗೊತ್ತಿಲ್ಲ.

ಸದ್ಯಕ್ಕೆ ನಿಂಬೆ ಏಕಚಕ್ರಾಧಿಪತ್ಯ ಸ್ಥಾಪಿಸಿಕೊಂಡು ಕೂತಿದೆ. ಅದರ ಸಮಕ್ಕೇರಲು ಟೊಮ್ಯಾಟೊ ಸಹ ಶಕ್ತಿಮೀರಿ ಪ್ರಯತ್ನಿಸಿ 'ಎಟುಕದ ನಿಂಬೆ ಹುಳಿ' ಎಂದುಕೊಂಡು ತೆಪ್ಪಗಾಗಿದೆ. ನಿಂಬೆ ಎಂಬ ರಂಭೆ, ಎಲ್ಲರನ್ನೂ ಕೈಗೊಂಬೆ ಮಾಡಿಕೊಂಡು ಕುಣಿಸುತ್ತಿದೆ. ಗೊಂಬೆಯಾಟವಯ್ಯಾ ಎನ್ನುವ ಹಾಡನ್ನು ಈಗ ನಿಂಬೆಯಾಟವಯ್ಯಾ ಎಂದು ಹಾಡುವ ಪರಿಸ್ಥಿತಿಗೆ ಬಂದು ನಿಂತಿದ್ದೇವೆ. ಯಾವಾಗ ಎಲ್ಲರ ಕೈಗೆಟುಕುತ್ತದೆಯೋ ಎಂದು ಎಲ್ಲರೂ ಕಣ್ಣಣ್ಣು ಬಿಟ್ಕೊಂಡು ಕಾಯುವ ಕಾಲ ಬಂದಿದೆ.

ಪ್ರತಿಕ್ರಿಯಿಸಿ: feedback@sudha.co.in

